**ಅಸಲು ದಾವಾ ಸಂ.39/2016**
ಪಿ .ಡಬ್ಲ್ಯೂ-1

ದಿನಾಂಕ 21-08-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಪ್ರತಿವಾದಿ ನಂ.1,2,4 ,6,8 ಪರ ಶ್ರೀ ಎಸ್ ಎ ಎಸ್ ವಕೀಲರಿಂದಃ**

ನಾನು 10 ನೇ ತರಗತಿ ವರೆಗೆ ಶಾಲೆ ಕಲಿತಿರುತ್ತೇನೆ . ನಾನು ಬ್ಯಾಂಕ ಆಫ್ ಬರೋಡಾ ಶಾಖೆ ಆಸಂಗಿ ದಲ್ಲಿ ಕ್ಲರ್ಕ ಅಂತಾ ಕೆಲಸ ಮಾಡುತ್ತಿದ್ದೇನೆ . ನಾನು ಹರಿಜನ ಕೇರಿ, ಅಶೋಕ ಕಾಲನಿ, ಬನಹಟ್ಟಿಯಲ್ಲಿ ವಾಸ ಇರುತ್ತೇನೆ . ನಾನು ಹುಟ್ಟನಿಂದ ಅಶೋಕ ಕಾಲನಿ, ಬನಹಟ್ಟಿಯಲ್ಲಿ ವಾಸ ಇರುತ್ತೇನೆ. ಅಲ್ಲಿ ಹಿರಿಯರ ಆಸ್ತಿ ಇದ್ದು ಅದರ ನಂಬರ ನನಗೆ ಗೊತ್ತಿರುವದಿಲ್ಲ . ನಾನು ವಾಸ ಇರುವ ಮನೆಯ ಕರ ವನ್ನು ನನ್ನ ಸಹೋದರರು ತುಂಬುತ್ತಾರೆ . ನಾನು ತುಂಬುವದಿಲ್ಲ ಎಂದರೆ ಸರಿ . ನಾನು ನನ್ನ ಅಣ್ಣತಮಂದಿರೊಂದಿಗೆ ಸದರಿ ಮನೆಯಲ್ಲಿ ವಾಸ ಇರುತ್ತೇನೆ . ಸಾಕ್ಷಿ ಮುಂದುವರೆದು ಜಾಗವನ್ನು ಖರೀದಿ ಮಾಡಿ ಅಲ್ಲಿ ಅಲ್ಲೆ ವಾಸ ಇರುತ್ತೇವೆ ಎಂದು ಹೇಳುತ್ತಾರೆ . ಖರೀದಿ ಮಾಡಿದ ಜಾಗೆಯ ಆರ್ ಎಸ್ ನಂಬರ 18 ಪ್ಲಾಟ್ ನಂಬರ 49, 50 ಮತ್ತು 51 ಇದ್ದು ಪುರಸಬೆ ನಂಬರ 2116 ಇರುತ್ತದೆ . ಸದರಿ ಜಾಗೆ ಅಶೋಕ ಕಾಲನಿಯಲ್ಲಿ ಇರುತ್ತದೆ ಎಂದರೆ ಸರಿ . ಸರ್ವೆ ನಂಬರ 18 ರಲ್ಲಿ ಒಟ್ಟು ಎಷ್ಟು ಪ್ಲಾಟಗಳು ಆಗಿವೆ ಎಂದು ನನಗೆ ಗೊತ್ತಿರುವದಿಲ್ಲ . ಸದರಿ ಪ್ಲಾಟ ನಂಬರ 49, 50 ಮತ್ತು 51 ಇವುಗಳ ಪ್ರತ್ಯೇಕ ಅಳತೆ, ಕ್ಷೇತ್ರ ಮತ್ತು ಚಕಬಂದಿಯನ್ನು ನನಗೆ ಹೇಳಲು ಬರುವದಿಲ್ಲ . ಆದರೆ 03 ಪ್ಲಾಟಗಳು ಕೂಡಿ ಒಟ್ಟು 49-64 ಪೂಟ್ ಇರುತ್ತದೆ . ದಕ್ಷಿಣ- ಉತ್ತರ 49 ಪೂಟ್ ಇದ್ದು ಪೂರ್ವ- ಪಶ್ಚಿಮ 64 ಪೂಟ್ ಇರುತ್ತದೆ . ಸದರಿ 03 ಪ್ಲಾಟಗಳ ಒಟ್ಟು ಕ್ಷೇತ್ರ ನಾನು ಹೇಳಿದಂತೆ ಇರುತ್ತದೆ . ನಾನು 03 ಪ್ಲಾಟಗಳನ್ನು ಒಟ್ಟಾಗಿ ಖರೀದಿ ಮಾಡಿರುತ್ತೇನೆ . ಅವು ಯಾವ ದಿಕ್ಕಿನಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವದಿಲ್ಲ . ಪ್ಲಾಟ ನಂಬರ 49 ಇದು ಪ್ಲಾಟ ನಂಬರ 50 ಮತ್ತು 51 ರ ಯಾವ ದಿಕ್ಕಿನಲ್ಲಿ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಪುನಃ 03 ಪ್ಲಾಟಗಳು ಒಟ್ಟಾಗಿ ಇರುತ್ತವೆ ಎಂದು ಹೇಳುತ್ತಾರೆ . 03 ಪ್ಲಾಟಗಳನ್ನು ಖರೀದಿ ಮಾಡುವ ಮೊದಲು ನಕ್ಷೆಯನ್ನು ನಾನು ನೋಡಿರುವದಿಲ್ಲ ಆದರೆ ಪುರಸಬೆ ಉತಾರೆಯನ್ನು ನೋಡಿರುತ್ತೇನೆ . ಪುರಸಬೆ ಉತಾರದಲ್ಲಿ ಸದರಿ ಪ್ಲಾಟಗಳ ನಕ್ಷೆಯನ್ನು ಕೊಟ್ಟಿರುವದಿಲ್ಲ . ಸರ್ವೆ ನಂಬರ 18 ರಲ್ಲಿ ಇರುವ ಪ್ಲಾಟಗಳು ಯಾವ ದಿಕ್ಕುಗಳಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ . ಸರ್ವೆ ನಂಬರ 18 ರ ಯಾವ ದಿಕ್ಕಿನಲ್ಲಿ ನಾನು ಖರೀದಿಸಿದ ಪ್ಲಾಟಗಳು ಬರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ .

ನಾನು ಸದರಿ ಪ್ಲಾಟಗಳನ್ನು ಪಾರ್ವತಿ ಮಲಕಪ್ಪ ಜಾಡಗೌಡ ಮತ್ತು ಬಾಗಿರತಿ ಗಾಡಪ್ಪ ಮುರಗೋಡ ಇವರಿಂದ ಖರೀದಿ ಮಾಡಿರುತ್ತೇನೆ . ಸದರಿಯವರಿಗೆ ಪ್ಲಾಟಗಳು ಹೇಗೆ ಬಂದಿತ್ತು ಎಂದು

ನನಗೆ ಗೊತ್ತಿರುವದಿಲ್ಲ . ಅದೇ ರೀತಿ ಅದರ ದಾಖಲೆಗಳನ್ನು ನಾನು ಹಾಜರು ಪಡಿಸಿರುತ್ತೇನೆ . ನಿಪಿ-2 ರ ಡ ಉತಾರವನ್ನು ಹಾಜರು ಪಡಿಸಿರುತ್ತೇನೆ . ಪಾರ್ವತಿ ಮಲಕಪ್ಪ ಜಾಡಗೌಡ ಮತ್ತು ಬಾಗಿರತಿ ಗಾಡಪ್ಪ ಮುರಗೋಡ ಇವರಿಗೆ ಪ್ಲಾಟ ಹೇಗೆ ಬಂದಿತ್ತು ಎಂದು ತೋರಿಸಲು ನಾನು ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ನಿಪಿ-2 ರಲ್ಲಿ ಸದರಿಯವರಿಗೆ ಪ್ಲಾಟ ಹೇಗೆ ಬಂದಿತ್ತು ಎಂದು ಏನು ನಮೂದು ಇರುವದಿಲ್ಲ ಎಂದರೆ ಸರಿಯಲ್ಲ . ಪ್ಲಾಟ ಖರೀದಿಸುವ ಮೊದಲು ಅದು ಮೂಲತಃ ಯಾರಿಂದ ಬಂದಿತ್ತು ಎಂದು ನಾನು ಚೌಕಾಶಿ ಮಾಡಿರುವದಿಲ್ಲ . 03 ಪ್ಲಾಟಗಳ ಕ್ಷೇತ್ರ 49-64 ಇದೆ ಎಂದು ತೋರಿಸಲು ಖರೀದಿ ಪತ್ರ ಹೊರತು ಪಡಿಸಿ ಪುರಸಬೆ ಉತಾರೆಯನ್ನು ಹಾಜರು ಪಡಿಸಿರುತ್ತೇನೆ . ಪುರಸಬೆ ಉತಾರೆಯಲ್ಲಿ ಪ್ಲಾಟಗಳ ಚಕಬಂದಿ ಕುರಿತಾಗಿ ಬರೆದಿಲ್ಲ ಎಂದರೆ ಸರಿಯಲ್ಲ .

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ. ದಂ., ಬನಹಟ್ಟಿ.**